ಕರ್ನಾಟಕ ಸರ್ಕಾರ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

# ರಾಜ್ಯ ನೀರು ಮತ್ತು ನೈರ್ಮಲ್ಯ ಮಿಷನ್

## ಸಂವಹನ ಮತ್ತು ಸಾಮರ್ಥ್ಯ ಅಭಿವೃದ್ಧಿ ಘಟಕ

ಸಂಖ್ಯೆ : ಗ್ರಾಅಪ/ರಾನೀನೈಮಿ/ಸಂಸ್ವಅಂ/ಜಿ.ಸ-57/11-12/2012-13/268 ದಿನಾಂಕ :02.09.2013

**ರವರಿಗೆ:**

**"ನೆನಪೋಲೆ"**

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
ಜಿಲ್ಲಾ ಪಂಚಾಯತ್
ಬೆಂಗಳೂರು ಗ್ರಾಮಾಂತರ/ ಶಿವಮೊಗ್ಗ/ಉಡುಪಿ/ ಉತ್ತರ ಕನ್ನಡ.

ಮಾನ್ಯರೆ,

***ವಿಷಯ:*** ಜಿಲ್ಲಾ ಸಮಾಲೋಚಕರನ್ನು ಗುತ್ತಿಗೆ ಕರಾರಿನ ಮೇಲೆ ತೆಗೆದುಕೊಳ್ಳುವ ಕುರಿತಂತೆ.

***ಉಲ್ಲೇಖ:***
1) ಈ ಕಛೇರಿ ಪತ್ರ ಸಮಸಂಖ್ಯೆ ದಿನಾಂಕ.29.03.2012 ಮತ್ತು 19.05.2012
2) ರಾಜ್ಯ ನೀರು ಮತ್ತು ನೈರ್ಮಲ್ಯ ಮಿಷನ್ ಮಾರ್ಗಸೂಚಿ
3) ಸಮಾಲೋಚಕರಿಗೆ ವೇತನ ನಿಗಧಿಪಡಿಸಿರುವ ಪತ್ರ ಸಂಖ್ಯೆ:ಗ್ರಾಅಪ/ರಾನೀನೈಮಿ/ಸಂಸ್ವಅಂ /164/10-11/2012-13, ದಿನಾಂಕ 4.03.2013
4) ಈ ಕಛೇರಿ ಪತ್ರ ಸಮಸಂಖ್ಯೆ ಪತ್ರ ದಿನಾಂಕ 06.07.2013.

- - -

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಪ್ರತಿ ಜಿಲ್ಲೆಯಲ್ಲಿಯೂ ಪೂರ್ಣ ಪ್ರಮಾಣದಲ್ಲಿ ಜಿಲ್ಲಾ ಸಮಾಲೋಚಕರನ್ನು ಗುತ್ತಿಗೆ ಕರಾರಿನಮೇಲೆ ತೆಗೆದುಕೊಳ್ಳುವಂತೆ ಉಲ್ಲೇಖದ ಈ ಕಛೇರಿ ಪತ್ರಗಳಲ್ಲಿ ಸೂಚಿಸಲಾಗಿತ್ತು. ಆದಾಗ್ಯೂ ಇನ್ನೂ 4 ಜಿಲ್ಲೆಗಳಲ್ಲಿ ಪೂರ್ಣ ಪ್ರಮಾಣದಲ್ಲಿ ಸಮಾಲೋಚಕರನ್ನು ತೆಗೆದುಕೊಳ್ಳದೇ ಇರುವುದು ಕಂಡುಬಂದಿರುತ್ತದೆ. ಆದ್ದರಿಂದ ನಿರ್ಮಲ ಭಾರತ್ ಅಭಿಯಾನ ಕಾರ್ಯಕ್ರಮದ ಮಾರ್ಗಸೂಚಿಯನ್ವಯ ಪ್ರಗತಿ ಸಾಧಿಸಲು ಸಾಧ್ಯವಾಗಿರುವುದಿಲ್ಲ.

ಉಲ್ಲೇಖ(4)ರ ಪತ್ರದಲ್ಲಿ ಸಮಾಲೋಚಕರ ವಿವರವನ್ನು ನೀಡಲಾಗಿದ್ದು, ಅದರನ್ವಯ ಅವಶ್ಯಕತೆ ಇರುವ ಜಿಲ್ಲಾ ಸಮಾಲೋಚಕರನ್ನು ತೆಗೆದುಕೊಳ್ಳಲು ರಾಜ್ಯ ನೀರು ಮತ್ತು ನೈರ್ಮಲ್ಯ ಮಿಷನ್ ಮಾರ್ಗಸೂಚಿ ಹಾಗೂ ಕರ್ನಾಟಕ ಪಾರದರ್ಶಕ ಅಧಿನಿಯಮದ ಅನುಸಾರ ಪತ್ರಿಕಾ ಪ್ರಕಟಣೆಯನ್ನು ದಿನಾಂಕ 15.07.2013ರೊಳಗೆ ಹೊರಡಿಸಿ ಒಂದು ಪ್ರತಿಯನ್ನು ಈ ಕಚೇರಿಗೆ ಸಲ್ಲಿಸುವಂತೆ ಹಾಗೂ ಸಮಾಲೋಚಕರನ್ನು ತೆಗೆದುಕೊಳ್ಳುವ ಸಂಪೂರ್ಣ ಪ್ರಕ್ರಿಯೆಯನ್ನು ದಿನಾಂಕ 15.08.2013ರೊಳಗೆ ಪೂರ್ಣಗೊಳಿಸಿ ಪೂರ್ಣ ಪ್ರಮಾಣದ ಸಮಾಲೋಚಕರ ಪಟ್ಟಿಯನ್ನು ಈ ಕಚೇರಿಗೆ ಸಲ್ಲಿಸಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚಿಸಲಾಗಿತ್ತು. ಆದರೂ ಸಹ ಇಲ್ಲಿಯವರೆಗೆ ಯಾವುದೇ ಕ್ರಮ ಕೈಗೊಳ್ಳದೇ ಇರುವುದು ವಿಷಾಧನೀಯವಾಗಿರುತ್ತದೆ. ಆದ್ದರಿಂದ ಕೂಡಲೇ ಸಮಾಲೋಚಕರನ್ನು ತೆಗೆದುಕೊಂಡು ವರದಿಯನ್ನು ರಾಜ್ಯ ಕಛೇರಿಗೆ ಸಲ್ಲಿಸಲು ತಿಳಿಸಿದೆ. **ಇದನ್ನು ಅತಿ ಜರೂರು ಎಂದು ಪರಿಗಣಿಸಲು ತಿಳಿಸಿದೆ.**

ತಮ್ಮ ವಿಶ್ವಾಸಿ,

ನಿರ್ದೇಶಕರ ಪರವಾಗಿ
ರಾಜ್ಯ ನೀರು & ನೈರ್ಮಲ್ಯ ಮಿಷನ್
ಗ್ರಾ ಅ ಮತ್ತು ಪಂಚಾಯತ್ ರಾಜ್ ಇಲಾಖೆ

**ಪ್ರತಿಯನ್ನು:-**

1. ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆರವರ ಆಪ್ತ ಕಾರ್ಯದರ್ಶಿಗಳ ಮಾಹಿತಿಗಾಗಿ.
2. ಕಾರ್ಯದರ್ಶಿಗಳು (ಪಂ.ರಾ), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆರವರ ಆಪ್ತ ಕಾರ್ಯದರ್ಶಿಗಳ ಮಾಹಿತಿಗಾಗಿ.

2ನೇ ಮಹಡಿ, ಕೆ.ಹೆಚ್.ಬಿ. ಬಿಲ್ಡಿಂಗ್, ಕಾವೇರಿಭವನ, ಬೆಂಗಳೂರು - 560 009.
ದೂರವಾಣಿ ಸಂ.22221861 : - ಫ್ಯಾಕ್ಸ್ :-22221862 E-mail : wsrdpr@gmail.com

No. 268
ರವಾನಿಸಲಾಗಿದೆ 04/09/13